ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ**

# ಸಿ. ಸಿ. ನಂ. 1391/2022

ಪಿರ್ಯಾದಿಃ ಶ್ರೀ ಹೇಮಂತಕುಮಾರ ಎಂ.ಎನ್, ತಂದೆಃ ಎಂ ನಾರಾಯಣ ಶೆಟ್ಟಿ,43 ವರ್ಷ,
ವಾಸಃ ನ್ಯೂ ಎಕ್ಸ್ ಟ್ನೆಶನ್, ಎ.ಎಸ್ ರಸ್ತೆ , ವಿರಾಜಪೇಟೆ,
ದ.ಕೊಡಗು.

(ಶ್ರೀ ಬಿ.ಎನ್.ಜೆ, ವಕೀಲರು)

***ವಿರುದ್ಧ***

ಆರೋಪಿಃ ಶ್ರೀ ಮದಕರಿ ನಾಯಕ ಕೆ, ತಂದೆಃಕೃಷ್ಣ ಪಿ.ಎಸ್,35 ವರ್ಷ,
ಗುತ್ತಿಗೆದಾರ, ನಂ.2502,3 ನೇ ಮುಖ್ಯ, 6 ನೇ ಕ್ರಾಸ್, ಜಯಲಕ್ಷ್ಮಿಪುರಂ,
ವಿನಾಯಕ ನಗರ,ಮೈಸೂರು –570 012.
(ಶ್ರೀ ಎ.ಜೆ.ಎಸ್, ವಕೀಲರು)

**<u>::ದಂಡ ಪ್ರಕ್ರಿಯಾ ಸಂಹಿತೆ ವಿಧಿ 313 (1)(ಬಿ) ರಡಿ ದಾಖಲಿಸಿದ ಆರೋಪಿತರ ಹೇಳಿಕೆ ::</u>**

ಪ್ರಶ್ನೆಃ 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ 2 ಫ್ರಾಸಾ–1 ಶ್ರೀ ಹೇಮಂತಕುಮಾರ ಎಂ.ಎನ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ಶ್ರೀ ಕೆ. ಮದಕರಿ ನಾಯಕ ಕೆ ರವರು ಪಿರ್ಯಾದಿಯವರಿಂದ ರೂ.2,60,000/– ವನ್ನು ಗುತ್ತಿಗೆ ಕೆಲಸಕ್ಕೆ ಸಾಲವಾಗಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 3 ಫ್ರಾಸಾ 1 ರವರು ಮುಂದುವರೆದು, ಸದರಿ ಹಣ ಮರು ಪಾವತಿ ಮಾಡುವ ಸಲುವಾಗಿ ಆರೋಪಿಯಾದ ನೀವು ಚೆಕ್ಕನ್ನು ನೀಡಿದ್ದು ಅದರಲ್ಲಿ ಚೆಕ್ ನಂಬರ್ 166015 ದಿನಾಂಕ

15.02.2022 ರಂದು ರೂ.2,60,000/- ಸಾಲವನ್ನು ತೀರಿಸುವ ಸಲುವಾಗಿ ಇಂಡಿಯನ್ ಬ್ಯಾಂಕ್, ವಿರಾಜಪೇಟೆ ಶಾಖೆಯ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್‌ನ್ನು ನೀಡಿದ್ದು, ಅದನ್ನು ನಗದೀಕರಿಸಿಕೊಂಡು ಸಾಲದ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 4 ಫ್ರಾಸಾ 1 ರವರು ಮುಂದುವರೆದು, ನಿಮ್ಮ ಕೋರಿಕೆಯ ಮೇರೆಗೆ ಸದರಿ ಚೆಕ್‌ನ್ನು ಇಂಡಿಯನ್ ಬ್ಯಾಂಕ್, ವಿರಾಜಪೇಟೆ ಶಾಖೆಯಲ್ಲಿ ನಗದೀಕರಿಸಲು ಸಲ್ಲಿಸಿದೆ ಆದರೆ ಆರೋಪಿಯ ಬ್ಯಾಂಕ್ ನವರು" Funds Insufficient" ಎಂಬ ಕಾರಣ ನೀಡಿ ದಿನಾಂಕ 10.05.2022 ರಂದು ಚೆಕ್‌ನ್ನು ಅಮಾನ್ಯಗೊಳಿಸಿ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 5 ಫ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 31.05.2022 ರಂದು ಆರೋಪಿಗೆ ತನ್ನ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್‌ನಲ್ಲಿನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ ಆದರೂ ಸಹಾ ಆರೋಪಿಯು ಚೆಕ್‌ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 6 ಫ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್‌ನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ ನಿಪಿ-1 ರಿಂದ ನಿಪಿ-5(ಎ)ನ್ನು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 7 ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ: 8 ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ: 9 ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

ಸಹಿ:

(ಸಂತೋಷ ಕೊಠಾರಿ )

ದಿನಾಂಕ:03.07.2024.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ವಿರಾಜಪೇಟೆ.